# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1271/2018

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕೆ. ಮಂಜಪ್ಪ | CW: 5 | PW: 4 |
| ತಂದೆಯ ಹೆಸರು | : | ಕೆಂಚಪ್ಪ | | |
| ವಯಸ್ಸು | : | 47 | | |
| ವೃತ್ತಿ | : | ಹೆಚ್ ಸಿ 168 | | |
| ವಾಸಸ್ಥಳ | : | ಹೊನ್ನಾಳಿ | | |

ದಿನಾಂಕಃ 10.12.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 2018 ರಿಂದ ಇಲ್ಲಿಯವರೆಗೆ ನ್ಯಾಮತಿ ಪೋಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 20.09.2018 ರಂದು ನಾನು ಠಾಣೆಯಲ್ಲಿದ್ದಾಗ, ಮಾದನಬಾವಿ ಗ್ರಾಮದಲ್ಲಿ ಯಾರೋ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ 1 ರವರು ಚಾಸಾ 4 ರವರಿಗೆ ವರದಿ ನೀಡಿರುತ್ತಾರೆ. ಹಾಗಾಗಿ ನಾವು ದಾಳಿಗೆ ಹೋಗಬೇಕು ಎಂದು ಚಾಸಾ 10 ರವರು ನನಗೂ, ಚಾಸಾ 4, 6 ಮತ್ತು 7 ರವರಿಗೆ ಚಾಸಾ 10 ರವರು ತಿಳಿಸಿ ದಾಳಿಗೆ ಸಹಕರಿಸುವಂತೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಚಾಸಾ 1 ರವರಿಗೆ ತಿಳಿಸಿರುತ್ತಾರೆ. ಅದರಂತೆ ಚಾಸಾ 1 ರವರು ಚಾಸಾ 2 ಮತ್ತು 3 ರವರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು ಅವರಿಗೆ

ಪ್ರಕರಣದ ಮಾಹಿತಿಯನ್ನು ಚಾಸಾ 10 ರವರು ನೀಡಿದ ಮೇರೆಗ ಅದಕ್ಕೆ ಅವರು ಒಪ್ಪಿಕೊಂಡಿದ್ದು, ಸಂಜೆ 5.20 ಗಂಟೆ ಸಮಯದಲ್ಲಿ ನಾನು, ಚಾಸಾ 2, 3, 4, 6 ಮತ್ತು 7 ಮತ್ತು 10 ರವರು ನಮ್ಮ ಇಲಾಖಾ ಜೀಪಿನಲ್ಲಿ ಮಾದನಬಾವಿ ಗ್ರಾಮಕ್ಕೆ ಹೋಗಿ ಕುಮಾರ್ ರವರ ಪೆಟ್ಟಿಗೆ ಅಂಗಡಿಗೆ ಫರ್ಲಾಂಗು ದೂರದಲ್ಲಿ ನಿಲ್ಲಿಸಿ ಮರೆನಿಂತು ನೋಡಲಾಗಿ, ಪೆಟ್ಟಿಗೆ ಅಂಗಡಿಯ ಮುಂಭಾಗ ಕುಮಾರ ಬಿನ್ ಶೇಖರಪ್ಪ ಹಾಗೂ ಶೇಖರಪ್ಪ ಬಿನ್ ದುರುಗಪ್ಪ ರವರು ಕೈಯಲ್ಲಿ ಮಧ್ಯದ ಪೌಚ್ ಗಳನ್ನು ಕೈಯಲ್ಲಿ ಹಿಡಿದುಕೊಂಡು ಮತ್ತು 1 ಬಿಳಿ ಬಣ್ಣದ ಚೀಲವನ್ನು ಹಿಡಿದುಕೊಂಡು ಮಾರಾಟ ಮಾಡುತ್ತಿದ್ದರು.

ಆಗ ನಾವು ಮತ್ತು ಪಂಚರು ಸೇರಿ ಸದರಿ ವ್ಯಕ್ತಿಗಳನ್ನು ಸುತ್ತುವರೆದು ಹಿಡಿದುಕೊಂಡೆವು ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಕುಮಾರ ಬಿನ್ ಶೇಖರಪ್ಪ ಹಾಗೂ ಶೇಖರಪ್ಪ ಬಿನ್ ದುರುಗಪ್ಪ, ಮಾದನಬಾವಿ ಗ್ರಾಮಸ್ಥರು ಎಂದು ತಿಳಿಸಿದರು. ಶೇಖರಪ್ಪ ರವರ ಸ್ಟಾರ್ ಬ್ಯಾಗ್ ಬಿಳಿ ಚೀಲದಲ್ಲಿ 49 ವಿಸ್ಕಿ ಪೌಚ್ ಗಳಿದ್ದವು. ಚಾಸಾ 10 ರವರು 2 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 1,530/- ರೂ.ಗಳಿದ್ದು ಅದನ್ನು ಅಮಾನತ್ತುಪಡಿಸಿಕೊಂಡರು. 1 ನೇ ಆರೋಪಿಯ ಕೈಯಲ್ಲಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 5 ಮಧ್ಯದ ಪೌಚ್ ಗಳು ಇದ್ದವು. 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 8,450/- ರೂ.ಗಳಿದ್ದವು. ಮಾರಾಟ ಮಾಡಲು ನಿಮಗೆ ಪರವಾನಗೆ ಇದೆಯಾ ಎಂದು ಚಾಸಾ 10 ರವರು ಆರೋಪಿಗಳಿಗೆ ಕೇಳಿದ್ದು ಅದಕ್ಕೆ ಅವರು ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ.

ಮಧ್ಯದ ಪೌಚ್ ಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಎನ್ ಎಂ ಟಿ ಎಂದು ಅರಗು ಸೀಲ್ ಹಾಕಿ, ಸಂಜೆ 6 ರಿಂದ 7 ರವರೆಗೆ ಪಂಚನಾಮೆ ಜರುಗಿಸಿ, ಅಮಾನತ್ತುಪಡಿಸಿಕೊಳ್ಳಲಾಯಿತು. ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇವೆ. ಆರೋಪಿಗಳನ್ನು ದಸ್ತಗಿರಿ ಮಾಡಿ ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ಮಧ್ಯದ ಮಾಲನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಈ ಸಂಬಂಧ ನಾನು ಚಾಸಾ 10 ರವರಿಗೆ ಹೇಳಿಕೆ ನೀಡಿರುತ್ತೇನೆ.

ಆರೋಪಿಗಳು ಗೈರು ಹಾಜರಿದ್ದು ಆರೋಪಿಗಳ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ 2 ಟ್ರೆಷರಿ ಬಾಕ್ಸ್ ನಲ್ಲಿದ್ದು ಮು.ಮಾ 2 ರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಯು ನಿಪಿ 2 ಅಮಾನತ್ತುಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಜಿ ಪರವಾಗಿ ಆರ್ ಎಲ್ ಡಿ ವಕೀಲರಿಂದಃ-

ದಿಃ 20.09.2018 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ, ಮಾದನಬಾವಿ ಗ್ರಾಮದಲ್ಲಿ ಯಾರೋ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಚಾಸಾ 1 ರವರು ವರದಿ ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹಾಗಾಗಿ ನಾವು ದಾಳಿಗೆ ಹೋಗಬೇಕು ಎಂದು ಚಾಸಾ 10 ರವರು ನನಗೂ , ಚಾಸಾ 4, 6 ಮತ್ತು 7 ರವರಿಗೆ ಚಾಸಾ 10 ರವರು ತಿಳಿಸಿ ದಾಳಿಗೆ ಸಹಕರಿಸುವಂತೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಚಾಸಾ 1 ರವರಿಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದರಂತೆ ಚಾಸಾ 1 ರವರು ಚಾಸಾ 2 ಮತ್ತು 3 ರವರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು ಅವರಿಗೆ ಪ್ರಕರಣದ ಮಾಹಿತಿಯನ್ನು ಚಾಸಾ 10 ರವರು ನೀಡಿದ ಮೇರೆಗ ಅದಕ್ಕೆ ಅವರು ಒಪ್ಪಿಕೊಂಡಿದ್ದು, ಸಂಜೆ 5.20 ಗಂಟೆ ಸಮಯದಲ್ಲಿ ನಾನು, ಚಾಸಾ 2, 3 , 4, 6 ಮತ್ತು 7 ಮತ್ತು 10 ರವರು ನಮ್ಮ ಇಲಾಖಾ ಜೀಪಿನಲ್ಲಿ ಮಾದನಬಾವಿ ಗ್ರಾಮಕ್ಕೆ ಹೋಗಿ ಕುಮಾರ್ ರವರ ಪೆಟ್ಟಿಗೆ ಅಂಗಡಿಗೆ ಫರ್ಲಾಂಗು ದೂರದಲ್ಲಿ ನಿಲ್ಲಿಸಿ ಮರೆನಿಂತು ನೋಡಲಾಗಿ, ಪೆಟ್ಟಿಗೆ ಅಂಗಡಿಯ ಮುಂಭಾಗ ಕುಮಾರ ಬಿನ್ ಶೇಖರಪ್ಪ ಹಾಗೂ ಶೇಖರಪ್ಪ ಬಿನ್ ದುರುಗಪ್ಪ ರವರು ಕೈಯಲ್ಲಿ ಮಧ್ಯದ ಪೌಚ್

ಗಳನ್ನು ಕೈಯಲ್ಲಿ ಹಿಡಿದುಕೊಂಡು ಮತ್ತು 1 ಬಿಳಿ ಬಣ್ಣದ ಚೀಲವನ್ನು ಹಿಡಿದುಕೊಂಡು ಮಾರಾಟ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆಗ ನಾವು ಮತ್ತು ಪಂಚರು ಸೇರಿ ಸದರಿ ವ್ಯಕ್ತಿಗಳನ್ನು ಸುತ್ತುವರೆದು ಹಿಡಿದುಕೊಂಡೆವು ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಕುಮಾರ ಬಿನ್ ಶೇಖರಪ್ಪ ಹಾಗೂ ಶೇಖರಪ್ಪ ಬಿನ್ ದುರುಗಪ್ಪ, ಮಾದನಬಾವಿ ಗ್ರಾಮಸ್ಥರು ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಶೇಖರಪ್ಪ ರವರ ಸ್ಟಾರ್ ಬ್ಯಾಗ್ ಬಿಳಿ ಚೀಲದಲ್ಲಿ 49 ವಿಸ್ಕಿ ಪೌಚ್ ಗಳಿದ್ದವು. ಚಾಸಾ 10 ರವರು 2 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 1,530/- ರೂ.ಗಳಿದ್ದು ಅದನ್ನು ಅಮಾನತ್ತುಪಡಿಸಿಕೊಂಡರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯ ಕೈಯಲ್ಲಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 5 ಮಧ್ಯದ ಪೌಚ್ ಗಳು ಇದ್ದವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ 8,450/- ರೂ.ಗಳಿದ್ದವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಾರಾಟ ಮಾಡಲು ನಿಮಗೆ ಪರವಾನಗೆ ಇದೆಯಾ ಎಂದು ಚಾಸಾ 10 ರವರು ಆರೋಪಿಗಳಿಗೆ ಕೇಳಿದ್ದು ಅದಕ್ಕೆ ಅವರು ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮಧ್ಯದ ಪೌಚ್ ಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಕಟ್ಟಿ ಎನ್ ಎಂ ಟಿ ಎಂದು ಅರಗು ಸೀಲ್ ಹಾಕಿ, ಸಂಜೆ 6 ರಿಂದ 7 ರವರೆಗೆ ಪಂಚನಾಮೆ ಜರುಗಿಸಿ, ಅಮಾನತ್ತುಪಡಿಸಿಕೊಳ್ಳಲಾಯಿತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳನ್ನು ದಸ್ತಗಿರಿ ಮಾಡಿ ಆರೋಪಿಗಳನ್ನು ಮತ್ತು ವಶಪಡಿಸಿಕೊಂಡ ಮಧ್ಯದ ಮಾಲನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಸಂಬಂಧ ನಾನು ಚಾಸಾ 10 ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮು.ಮಾಗಳಿಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನಿಪಿ 3 ಮತ್ತು 4 ಪೋಟೋಗಳಲ್ಲಿ ಇಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.